ಅಧ್ಯಕ್ಷರು.—ಮಾನ್ಯ ನಾರಾಯಣ್‌ರವರೇ, ತಾವು ಪ್ರಶ್ನೆಯನ್ನು ಕೇಳಿ ?

ಶ್ರೀ ಆರ್. ನಾರಾಯಣ್.—ಬಸ್ ಪ್ರಯಾಣದಲ್ಲಿ ಏನಾದರು ರಿಯಾಯಿತಿ ತೋರಿಸಬೇಕೆಂದು ಕೇಳಿರುವುದಕ್ಕೆ ಸಭ್ಯದಲ್ಲಿ ಯಾವ ಪ್ರಸ್ತಾಪವು ಇಲ್ಲವೆಂದು ಹೇಳಿದ್ದಾರೆ. ಅದಕ್ಕೆ ನಾನಾದರು ಹೇಳುವುದು ಇಷ್ಟೇ. ಅವರು ಗಳಿಸಿರುವ ಪ್ರಶಸ್ತಿಗೆ ಏನಾದರೂ ಒಂದು ಪ್ರಾಮುಖ್ಯತೆ ಇರಬೇಕಾದರೆ ಕೆಲವೊಂದು ರಿಯಾಯಿತಿ ಮತ್ತು ಉತ್ತೇಜನ ವನ್ನು ಕೊಡಬೇಕಾಗುತ್ತದೆ. ಇವತ್ತು ರಾಜ್ಯದಲ್ಲಿ ಹಿಂಸಾಚಾರ ಮತ್ತು ಅಪರಾಧ ಗಳು ಬಹುಸಂಖ್ಯೆಯಲ್ಲಿ ಹೆಚ್ಚಾಗುತ್ತಿದೆ. ಅಷ್ಟೇ ಮಟ್ಟಿಗೆ ಪೋಲೀಸ್‌ನವರ ಕರ್ತವ್ಯ ಮತ್ತು ಜವಾಬ್ದಾರಿಯೂ ಕೂಡ ಜಾಸ್ತಿಯಾಗಿದೆ. ಇಂತಹವರಿಗೆ ಕೆಲವೊಂದು ರೀತಿಯ ಪ್ರಾಮುಖ್ಯತೆ ಯನ್ನು ಮತ್ತು ಪ್ರೋತ್ಸಾಹವನ್ನು ಕೊಡುತ್ತಿರುವಾಗ ಅವರಿಗೆ ನೈತ್ತಿಕ ಸ್ಥೈರ್ಯವನ್ನು ತುಂಬುವ ದೃಷ್ಟಿ ಯಿಂದ ಅವರಿಗೆ ಬಸ್ಸಿನ ಪ್ರಯಾಣದಲ್ಲಿ ರಿಯಾಯಿತಿಯನ್ನು ಕೊಡಬೇಕು. ಮತ್ತು ನಿವೇಶನ ಇಲ್ಲ ದವರಿಗೆ ನಿವೇಶವನ್ನು ಕೊಡುವುದರಲ್ಲಿ ಯಾವ ತೊಂದರೆಯೂ ಇಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಕೆಲವೊಂದು ಸಲಹೆ ಗಳನ್ನು ಕೊಟ್ಟಿದ್ದಾರೆ, ಅದನ್ನು ಸರ್ಕಾರ ಪರಿಶೀಲನೆ ಮಾಡುತ್ತದೆಂದು ಹೇಳುತ್ತೇನೆ.

## ವರದಕ್ಷಿಣೆ ಸಾವುಗಳು

೪೨೫. ಶ್ರೀ ಎಂ.ವಿ. ವೆಂಕಟಪ್ಪ (ಪಂಚಳ್ಳಿಬಾಗಲು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳ ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ವರದಕ್ಷಿಣೆ ಸಾವುಗಳ ಸಂಖ್ಯೆ

ಆ) ನ್ಯಾಯಾಲಯದಲ್ಲಿ ಮೊಕದ್ದಮೆ ಪ್ರಕರಣಗಳ ಸಂಖ್ಯೆ

ಇ) ಶಿಕ್ಷೆಗೊಳಗಾದವರ ಒಟ್ಟು ಸಂಖ್ಯೆ (ನ್ಯಾಯಾಲಯದಲ್ಲಿ ಶಿಕ್ಷೆಯಾದವರು)

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ವರದಕ್ಷಿಣೆ ಸಾವುಗಳ ಸಂಖ್ಯೆ ಈ ಕೆಳಕಂಡಂತಿವೆ.—

| | | |
|---|---|---|
| ೧೯೮೬ | ... | ೬೫ |
| ೧೯೮೭ | ... | ೧೦೬ |
| ೧೯೮೮ | ... | ೧೪೨ |
| ೧೯೮೯ | ... | ೧೯೦ |
| ೧೯೯೦ | ... | ೭೮ |
| | | (೩೧-೫-೯೦ರವರಗೆ) |

ಆ)

| | | |
|---|---|---|
| ೧೯೮೬ | ... | ೬೦ |
| ೧೯೮೭ | ... | ೯೫ |
| ೧೯೮೮ | ... | ೧೪೪ |
| ೧೯೮೯ | ... | ೧೨೫ |
| ೧೯೯೦ | ... | ೫೮ |

ಇ) ೧೯೮೬ ರಲ್ಲಿ ದಾಖಲಾದ ಒಟ್ಟು ಪ್ರಕರಣಗಳಲ್ಲಿ ೫೫ ಪ್ರಕರಣಗಳಲ್ಲಿ ೮ ಜನ ನ್ಯಾಯಾಲಯ ದಿಂದ ಶಿಕ್ಷೆಗೊಳಗಾಗಿದ್ದಾರೆ,

೧೯೮೭ ರಲ್ಲಿ ದಾಖಲಾದ ಒಟ್ಟು ಪ್ರಕರಣಗಳಲ್ಲಿ ೫೫ ಪ್ರಕರಣಗಳಲ್ಲಿ ೮ ಜನರು ನ್ಯಾಯಾಲಯದಿಂದ ಶಿಕ್ಷೆಗೊಳಗಾಗಿದ್ದಾರೆ.

೧೯೮೮, ೧೯೮೯ ಮತ್ತು ೧೯೯೦ ರಲ್ಲಿ ಯಾವ ಪ್ರಕರಣಗಳೂ ಇಲ್ಲಿಯವರೆಗೂ ಶಿಕ್ಷೆ ಗೊಳಗಾಗಿಲ್ಲ.

ಶ್ರೀ ಎಂ.ವಿ. ವೆಂಕಟಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಉತ್ತರದಲ್ಲಿ ೧೯೮೬–ಮತ್ತು ೧೯೮೭ರಲ್ಲಿ ಒಟ್ಟು ೧೬ ಜನರು ವರದಕ್ಷಿಣೆಯ ಕಾಯಿದೆಯನ್ವಯ ಶಿಕ್ಷೆಗೆ ಒಳಗಾಗಿದ್ದಾರೆಂದು ಹೇಳಿದ್ದಾರೆ. ಇದರಲ್ಲಿ ಐ.ಎ ಎಸ್. ಐ.ಪಿ.ಎಸ್· ಕೆ.ಎ.ಸ್. ಮತ್ತು ಡಾಕ್ಟರುಗಳು ಸಹ ಸೇರಿರುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ,—ಮಾನ್ಯ ಅಧ್ಯಕ್ಷರೇ, ನನಗೆ ಬಂದ ಮಾಹಿತಿ ಪ್ರಕಾರ ತಾವು ಹೇಳಿದಂಥ ಕ್ಯಾಟಗರಿ ಆಫೀಸರ್‌ಗಳು ಇದರಲ್ಲಿ ಸೇರಿಲ್ಲ.

ಶ್ರೀ ಎಂ. ವಿ. ವೆಂಕಟಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಹೇಳಿದಂತೆ ಶಿಕ್ಷೆಗೆ ಒಳಗಾದವರ ಪೈಕಿ ಅತ್ತೆ ಮಾವಂದಿರು ಮತ್ತು ಮಗ ಈ ವರ್ಗದವರು ಸೇರಿರಂತ್ತಾರೆಯೋ ಅಥವಾ ಬರೆ ಅತ್ತೆ ಮಾವಂದಿರು ಸೇರಿದ್ದಾರೆಯೋ ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಅದರ ವಿವರಗಳು ನನ್ನಲ್ಲಿ ಇಲ್ಲ. ಅದಕ್ಕೆ ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ ಉತ್ತರವನ್ನು ಒದಗಿಸಿಕೊಡಲಾಗುತ್ತದೆ.

ಶ್ರೀ ಎಂ. ವಿ. ವೆಂಕಟಪ್ಪ.—ಸರ್ಕಾರದವರು ಟಿ. ವಿ. ರೇಡಿಯೋ ಮತ್ತು ಪತ್ರಿಕೆಗಳ ಮುಖಾಂತರ ಬಹಳ ಹಿಂದಿನಿಂದಲೂ ಪಾನ ನಿರೋಧದ ಬಗ್ಗೆ, ಹೆಂಡ ಕುಡಿಯಬಾರದೆಂದು ಬಹಳವಾಗಿ ಪ್ರಚಾರ ಮಾಡುತ್ತಿದ್ದಾರೆ. ಅದೇ ರೀತಿ ಈ ವರದಕ್ಷಿಣೆ ಬಗ್ಗೆಯೂ ಪ್ರಚಾರ ಮಾಡಲು ಕ್ರಮ ತೆಗೆದುಕೊಳ್ಳುತ್ತೀರಾ? ಅತ್ತೆ ಮಾವಂದಿರುಗಳು ಈ ರೀತಿ ವರದಕ್ಷಿಣೆಯನ್ನು ತೆಗೆದುಕೊಳ್ಳಬಾರದೆಂದು ಅವರ ಮನಸ್ಸನ್ನು ಮಾನಸಿಕವಾಗಿ ಬದಲಾವಣೆ ಮಾಡುವುದಕ್ಕೆ ಏನಾದರು ಕ್ರಮ ತೆಗೆದುಕೊಳ್ಳುತ್ತೀರಾ ? ಮತ್ತು ಸರ್ಕಾರ ಇದರ ಬಗ್ಗೆ ಪ್ರಚಾರ ಮಾಡುವುದಕ್ಕೆ ಏನಾದರು ಏರ್ಪಾಡು ಮಾಡುತ್ತದೆಯೇ ಹೇಗೆ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಸದಸ್ಯರು ಕೊಟ್ಟ ಸಲಹೆ ಅತಿ ಉತ್ತಮವಾದ ಸಲಹೆಯಾಗಿರುತ್ತದೆ. ಈಗಾಗಲೇ ನಾವು ದೂರದರ್ಶನದಲ್ಲಿ ಈ ಬಗ್ಗೆ ಸಾಕಷ್ಟು ಪ್ರಚಾರ ಮತ್ತು ತಿಳುವಳಿಕೆಯನ್ನು ಕೊಡುತ್ತಿದ್ದೇವೆ ಅವರ ಮನಸ್ಸನ್ನು ಪರಿವರ್ತನೆ ಮಾಡುವುದಕ್ಕೆ ದೂರದರ್ಶನದಲ್ಲಿ ಬರುತ್ತಿದೆ. ನಾವು ಕೂಡ ಸಾಕಷ್ಟು ಪ್ರಚಾರ ಸಾಧನಗಳನ್ನು ಮಾಡಿ ಬೇರೆ ಬೇರೆ ರೀತಿಯಲ್ಲಿ ಅಂದರೆ ಮಹಿಳಾ ಕಲ್ಯಾಣ ಇಲಾಖೆಯವರು ಮಾಡುತ್ತಿದ್ದಾರೆ. ಮತ್ತು ಲೀಗಲ್ ಏಡ್ ಬೋರ್ಡ್ ಮುಖಾಂತರ ಸಾಕಷ್ಟು ಪ್ರಚಾರ ಮಾಡುತ್ತಿದ್ದೇವೆ. ಜೊತೆಗೆ ಈ ಪ್ರಚಾರ ಸಾಧನೆಗಳ ಮೂಲಕ ಅವರ ಮನಸ್ಸನ್ನು ಪರಿವರ್ತನೆ ಮಾಡಲು ಇನ್ನೂ ಯಾವ ರೀತಿ ಮಾಡಲಿಕ್ಕೆ ಸಾಧ್ಯವಿದೆಯೋ ಅದೆಲ್ಲವನ್ನು ಮಾಡಲಂ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ.

ಶ್ರೀಮತಿ ಚಂದ್ರಪ್ರಭಾ ಅರಸು.— ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ವೆಂಕಟಪ್ಪನವರು ಇದೇತಾನೇ ವರದಕ್ಷಿಣೆ ತಪ್ಪಿಸಕು ಎಂದು ಹೇಳುತ್ತಿದ್ದರು. ಈ ವರದಕ್ಷಿಣೆ ಪಿಡುಗು ಎಲ್ಲಿಯವರೆಗೆ ಹೋಗಿದೆ ಎಂದರೆ ಇದು ಬರೀ ಶಾಸನ ಆದರೆ ಅದನ್ನು ಜಾರಿಗೆ ಕೊಡುವುದಕ್ಕಾಗುವುದಿಲ್ಲ. ಪ್ರಸಾರ ಮಾಧ್ಯಮದ ಮೂಲಕ ಇದನ್ನು ತಪ್ಪಿಸಲು ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಕೇವಲ ಇದರಿಂದ ವರದಕ್ಷಿಣೆ ಪಿಡುಗನ್ನು ತಪ್ಪಿಸುವುದಕ್ಕಾಗುವುದಿಲ್ಲ. ಗಂಡಸರು ವರದಕ್ಷಿಣೆ ತೆಗೆದುಕೊಳ್ಳುವುದಿಲ್ಲ ವರದಕ್ಷಿಣೆ ತೆಗೆದುಕೊಳ್ಳುವುದು ಗಂಡಸುತನಕ್ಕೆ ಇದು ಅವಮಾನ ಎಂದು ಪ್ರತಿಜ್ಞೆ ಮಾಡುವಂತಹ ಪ್ರಚಾರ ಮಾಡುವಂತಹ ಕೆಲಸವನ್ನು ಎಲ್ಲರೂ ಸೇರಿ ಮಾಡುವುದು ಒಳ್ಳೆಯದೆಂದು ಸಲಹೆ ಮಾಡುತ್ತೇನೆ.

ಶ್ರೀ ಬನ್ನಿಕೋಡ್ ಬಸಪ್ಪ — ವರದಕ್ಷಿಣೆ ಕೇಳುವವರನ್ನು ನಂಬುವೆಯಾಗುವುದಿಲ್ಲ ಎಂದು ಹೆಣ್ಣುಮಕ್ಕಳೂ ಪ್ರತಿಜ್ಞೆ ಮಾಡಿದರೆ ಇನ್ನೂ ಒಳ್ಳೆಯದು.

(ಸಭೆಯಲ್ಲಿ ನಗು)

ಶ್ರೀ ಎಂ. ವೀರಪ್ಪ ಮೊಯಿಲಿ.— ಇದೂ ಒಳ್ಳೆಯ ಸಲಹೆ.

## ಕೆಂಗಲ್ ಹನುಮಂತಯ್ಯನವರ ಪ್ರತಿಮೆ

೬೭೨ ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿಧಾನ ಸೌಧದ ಪಶ್ಚಿಮ ಭಾಗದಲ್ಲಿ ನಿಲ್ಲಿಸಿರುವ ಮಾಜಿ ಮುಖ್ಯ ಮಂತ್ರಿ ಕೆಂಗಲ್ ಹನುಮಂತಯ್ಯನವರ ಪ್ರತಿಮೆಯನ್ನು ಬದಲಾಯಿಸಲು ಸರ್ಕಾರ ತೀರ್ಮಾನ ತೆಗೆದುಕೊಂಡಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಈ ಕಾರ್ಯವನ್ನು ಎಂದಿನಿಂದ ಪ್ರಾರಂಭಿಸಲಾಗುವುದು ಮತ್ತು ಅದಕ್ಕೆ ಎಷ್ಟು ಮೊತ್ತ ಖರ್ಚಾಗುತ್ತದೆ ?